# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಪಶ್ಚಿಮ ಘಟ್ಟಗಳ ಅಭಿವೃದ್ಧಿ ಕಾರ್ಯಕ್ರಮದ ಅಡಿ 2014-15ನೇ ಸಾಲಿನ ಕೊನೆಯ ಕಂತಿನ ಅನುದಾನವನ್ನು ಜಿಲ್ಲಾ ಪಂಚಾಯತಿಗಳಿಗೆ ಬಿಡುಗಡೆ ಮಾಡುವ ಕುರಿತು.

ಓದಲಾಗಿದೆ:-1)ಆರ್ಥಿಕ ಇಲಾಖೆಯ ಸರ್ಕಾರಿ ಆದೇಶ ಸಂ.ಆಇ/274/ಬಿಆರ್‌ಎಸ್/2015 ದಿನಾಂಕ:23-03-2016.

2)ಆರ್ಥಿಕ ಇಲಾಖೆಯ ಟಿಪ್ಪಣಿ ಸಂ.ಆಇ/241/ವೆಚ್ಚ-6/2015, ದಿನಾಂಕ: 27-02-2016.

3) ಕೇಂದ್ರ ಸರ್ಕಾರ (ನೀತಿ ಆಯೋಗ)ದ ಪತ್ರ ಸಂ.ಎಂ-13053/7/4/2014-ಎಂಎಲ್‌ಪಿ ದಿ:23-03-15.

4) ಕೇಂದ್ರ ಸರ್ಕಾರ (ನೀತಿ ಆಯೋಗ)ದ ಪತ್ರ ಸಂ.ಎಂ-13053/7/4/2014-ಎಂಎಲ್‌ಪಿ ದಿ:30-07-14.

****

**ಪ್ರಸ್ತಾವನೆ:-**

ಪಶ್ಚಿಮ ಘಟ್ಟಗಳ ಅಭಿವೃದ್ಧಿ ಯೋಜನೆಯ 2014-15ನೇ ಸಾಲಿನ ಕ್ರಿಯಾಯೋಜನೆಯು ಮೇಲೆ ಓದಲಾದ (3) ರನ್ವಯ ಅನುಮೋದನೆಯಾಗಿರುತ್ತದೆ. 2014-15ನೇ ಸಾಲಿನಲ್ಲಿ ಪಶ್ಚಿಮ ಘಟ್ಟಗಳ ಅಭಿವೃದ್ಧಿ ಯೋಜನೆಗೆ ₹ 3240.00 ಲಕ್ಷಗಳು ನಿಗದಿಯಾಗಿರುತ್ತದೆ. ನಿಗದಿಯಾಗಿರುವ ಅನುದಾನದ ಪೈಕಿ ಈಗಾಗಲೇ ಶೇ.87.50% ಅಂದರೆ ₹ 2835.00 ಲಕ್ಷಗಳನ್ನು (ಕೇಂದ್ರ: ₹2187.00 ರಾಜ್ಯ: ₹648.00 ಲಕ್ಷ) ಅನುಮೋದನೆಯಾದ ಕಾಮಗಾರಿಗಳನ್ನು ಅನುಷ್ಠಾನ ಮಾಡಲು ಬಿಡುಗಡೆ ಮಾಡಲಾಗಿದೆ. ಮೇಲೆ ಓದಲಾದ (2)ರನ್ವಯ ಅನುಮೋದನೆಯಾದ ಕಾಮಗಾರಿಗಳಿಗೆ ಉಳಿದ ಅನುದಾನವನ್ನು ರಾಜ್ಯ ಸರ್ಕಾರದಿಂದ ಒದಗಿಸಿಕೊಳ್ಳಲು ತಿಳಿಸಲಾದ ಹಿನ್ನಲೆಯಲ್ಲಿ, ಮುಂದುವರೆದ ಕಾಮಗಾರಿಗಳಿಗೆ ಬೇಕಾಗಿರುವ ₹ 207.00ಲಕ್ಷ ಅನುದಾನವನ್ನು 2015-16ರ ಆರ್ಥಿಕ ವರ್ಷದ ಪೂರಕ ಅಂದಾಜು-3ರಲ್ಲಿ ಹೆಚ್ಚುವರಿಯಾಗಿ ಬಿಡುಗಡೆ ಮಾಡಲು ಮೇಲೆ ಓದಲಾದ(1)ರ ಸರ್ಕಾರಿ ಆದೇಶದಲ್ಲಿ ಹಾಗೂ ಓದಲಾದ(2)ರ ಟಿಪ್ಪಣಿಯಲ್ಲಿ ಆರ್ಥಿಕ ಇಲಾಖೆಯು ಸಹಮತಿಸಿರುತ್ತದೆ.

ಮೇಲೆ ಓದಲಾದ(1)ರ ಆರ್ಥಿಕ ಇಲಾಖೆಯ ಸರ್ಕಾರಿ ಆದೇಶ ಹಾಗೂ ಓದಲಾದ(2)ರ ಆರ್ಥಿಕ ಇಲಾಖೆಯ ಟಿಪ್ಪಣಿಯನ್ವಯ 2014-15ನೇ ಸಾಲಿನ ಅನುಮೋದಿತ ಕ್ರಿಯಾಯೋಜನೆಯ ಕಾಮಗಾರಿಗಳ ಸಲುವಾಗಿ, 2015-16ನೇ ಸಾಲಿನ ಪೂರಕ ಅಂದಾಜು-3 ರಲ್ಲಿ **ಲೆಕ್ಕಶೀರ್ಷಿಕೆ:** 2551-01-198-6-02-300(ಯೋಜನೆ) ರಡಿ ಹೆಚ್ಚುವರಿಯಾಗಿ ಒದಗಿಸಿರುವ ₹ 207.00 ಲಕ್ಷಗಳನ್ನು ಅನುಬಂಧ-1

ರಂತೆ ಪಶ್ಚಿಮ ಘಟ್ಟಗಳ ಅಭಿವೃದ್ಧಿ ಯೋಜನೆಯಡಿ ಬರತಕ್ಕ ಜಿಲ್ಲೆಗಳಿಗೆ ಬಿಡುಗಡೆ ಮಾಡಲು ಸರ್ಕಾರವು ತೀರ್ಮಾನಿಸಿರುತ್ತದೆ, ಆದುದರಿಂದ ಈ ಆದೇಶ.

**ಸರ್ಕಾರದ ಆದೇಶ ಸಂ.ಗ್ರಾಅಪ.18.ಪಘಯೋ.2015 ಬೆಂಗಳೂರು, ದಿನಾಂಕ:24-03-2016.**

ಕೇಂದ್ರ ಪುರಸ್ಕೃತ ಪಶ್ಚಿಮ ಘಟ್ಟಗಳ ಅಭಿವೃದ್ಧಿ ಯೋಜನೆಯ ಕಾರ್ಯಕ್ರಮದ **2014-15**ನೇ ಸಾಲಿನ ಮುಂದುವರೆದ ಕ್ರಿಯಾಯೋಜನೆಯ ಕಾರ್ಯಕ್ರಮಗಳನ್ನು ಪೂರ್ಣಗೊಳಿಸಲು ಅಂತಿಮ ಕಂತಾದ **₹ 207.00** ಲಕ್ಷಗಳನ್ನು **(ರೂ.ಎರಡು ನೂರ ಏಳು ಲಕ್ಷಗಳು ಮಾತ್ರ)** ರಾಜ್ಯದ **8** ಜಿಲ್ಲಾ ಪಂಚಾಯತ್ (ಬೆಳಗಾಂ/ಚಾಮರಾಜನಗರ/ಧಾರವಾಡ/ದಕ್ಷಿಣಕನ್ನಡ/ ಹಾಸನ/ ಕೊಡಗು/ ಮೈಸೂರು ಮತ್ತು ಉಡುಪಿ) ಗಳಿಗೆ **ಅನುಬಂಧ-1**ರಂತೆ ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಬಿಡುಗಡೆ ಮಾಡಲಾಗಿದೆ.

1. 2014-15ನೇ ಸಾಲಿನ ನಿಮ್ಮ ಜಿಲ್ಲೆಯ ಅನುಮೋದಿತ ಕ್ರಿಯಾಯೋಜನೆಯ ಮುಂದುವರಿದ ಕಾಮಗಾರಿಗಳಿಗೆ ಮಾತ್ರ ಈ ಅನುದಾನ ಬಳಕೆ ಮಾಡಿ ಹಣಬಳಕೆ ಪ್ರಮಾಣಪತ್ರ ಮತ್ತು ಆಡಿಟ್ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಬೇಕು.

2. ಬಿಡುಗಡೆ ಮಾಡುತ್ತಿರುವ ಈ ಕಂತಿನ ಅನುದಾನದಲ್ಲಿ **ಎಸ್‌ಸಿಪಿ** ಹಾಗೂ **ಟಿಎಸ್‌ಪಿ** ಚಟುವಟಿಕೆಗಳಿಗೆ ಕ್ರಮವಾಗಿ **22%** ಹಾಗೂ **11%** ಅನುದಾನವನ್ನು ಕಡ್ಡಾಯವಾಗಿ ವೆಚ್ಚ ಮಾಡಬೇಕು.

3. ಚಾಲ್ತಿ ಪಶ್ಚಿಮ ಘಟ್ಟಗಳ ಅಭಿವೃದ್ಧಿ ಯೋಜನೆಯ ಮಾರ್ಗಸೂಚಿಯನ್ವಯ ಅನುಷ್ಠಾನಗೊಳಿಸುವುದು.

4. ಒಂದು ವಲಯಕ್ಕೆ ನಿಗದಿಪಡಿಸಿರುವ ಅನುದಾನವನ್ನು ಇನ್ನೊಂದು ವಲಯಕ್ಕೆ ಯಾವುದೇ ಕಾರಣಕ್ಕೂ ವರ್ಗಾಯಿಸಬಾರದು.

5. ನಿಗದಿಪಡಿಸಿರುವ ನಮೂನೆಯಲ್ಲೇ ಪ್ರತಿ ಮಾಸಿಕ ಹಾಗೂ ತ್ರೈಮಾಸಿಕ ವರದಿಯನ್ನು ಸಕಾಲದಲ್ಲಿ ತಪ್ಪದೇ ಸರ್ಕಾರಕ್ಕೆ ಸಲ್ಲಿಸುವುದು.

6. ಜಿಲ್ಲಾ ಪಂಚಾಯತಿಯ ಮುಖ್ಯ ಲೆಕ್ಕಾಧಿಕಾರಿಗಳು ಸಹಾಯಾನುದಾನದ ಬಿಲ್ಲಿನ ಮೇಲೆ ನಿಯಮಗಳ ಪ್ರಕಾರ ಅನುದಾನವನ್ನು ಈ ಕೆಳಕಂಡ ಲೆಕ್ಕಶೀರ್ಷಿಕೆಯಲ್ಲಿ ಖಜಾನೆಯಿಂದ ಪಡೆಯುವುದು.
7. ಪ್ರಗತಿ ವರದಿಯನ್ನು ಎಂಪಿಕ್/ಕೆಡಿಪಿ ಸಭೆಗಳಲ್ಲಿ ಪರಿಶೀಲನೆಗೆ ಮಂಡಿಸುವುದು.
8. ಕಾಮಗಾರಿಗಳನ್ನು ಕಡ್ಡಾಯವಾಗಿ ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶದಲ್ಲಿ ವಿವರ ಹಾಗೂ ಛಾಯಾಚಿತ್ರಗಳನ್ನು ಅಳವಡಿಸಿದ ನಂತರವೇ ಬಿಲ್ಲುಗಳನ್ನು ಪಾವತಿಸಬೇಕು.
9. ಮಾರ್ಚ್ 2016ರ ಅಂತ್ಯಕ್ಕೆ ಈವರೆಗೂ ಬಿಡುಗಡೆಯಾಗಿರುವ ಅನುದಾನವನ್ನು ಸಂಪೂರ್ಣವಾಗಿ ವೆಚ್ಚಮಾಡಿ ಹಣಬಳಕೆ ಪ್ರಮಾಣಪತ್ರ ಮತ್ತು verification Reports ನ್ನು ಸರ್ಕಾರಕ್ಕೆ ಕಳುಹಿಸಲು ಕೋರಿದೆ.

ಈ ಯೋಜನೆಯಡಿ ಮೀಸಲಿಟ್ಟಿರುವ ಅನುದಾನವನ್ನು **ಜಿಲ್ಲಾ ವಲಯದ ಲೆಕ್ಕಶೀರ್ಷಿಕೆ: 2551-01-198-6-02-300(ಯೋಜನೆ)** ರಡಿ ಭರಿಸುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಸರ್ಕಾರಿ ಆದೇಶ ಸಂ.ಆಇ/274/ಬಿಆರ್‌ಎಸ್/2015 ದಿನಾಂಕ:23-03-2016 ಹಾಗೂ ಆರ್ಥಿಕ ಇಲಾಖೆಯ ಟಿಪ್ಪಣಿ ಸಂ.ಆಇ/241/ವೆಚ್ಚ-6/2015 ದಿನಾಂಕ: 27-02-2016 ರನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಎನ್.ಕೃಷ್ಣಪ್ಪ)
ನಿರ್ದೇಶಕರು(ಗ್ರಾ.ಮೂ.ಸೌ-2) ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿಗಳು,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ,
**karwgdp@gmail.com Ph.No. 080-22343509**

**ಗೆ:**

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು ರವರಿಗೆ ಈ ಆದೇಶವನ್ನು ರಾಜ್ಯ ಪತ್ರದ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲು ಕೋರಿ.

ಪ್ರತಿಯನ್ನು ಸೂಕ್ತ ಕ್ರಮಕ್ಕಾಗಿ:

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು/ಧಾರವಾಡ
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು/ಮುಖ್ಯ ಲೆಕ್ಕಾಧಿಕಾರಿಗಳು/ಉಪ ಕಾರ್ಯದರ್ಶಿ(ಅಭಿ), ಜಿಲ್ಲಾ ಪಂಚಾಯತ್, ಬೆಳಗಾಂ/ಚಾಮರಾಜನಗರ/ದಕ್ಷಿಣ ಕನ್ನಡ/ ಧಾರವಾಡ/ ಹಾಸನ/ ಕೊಡಗು/ ಮೈಸೂರು ಮತ್ತು ಉಡುಪಿ
3. ಜಿಲ್ಲಾ ಖಜಾನಾಧಿಕಾರಿಗಳು, ಬೆಳಗಾಂ/ಚಾಮರಾಜನಗರ/ದಕ್ಷಿಣ ಕನ್ನಡ/ ಧಾರವಾಡ/ಹಾಸನ/ ಕೊಡಗು/ಮೈಸೂರು ಮತ್ತು ಉಡುಪಿ
4. ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ, ಕಾವೇರಿ ಭವನ, 7ನೇ ಮಹಡಿ, ಕರ್ನಾಟಕ ಗೃಹ ಮಂಡಳಿ ಕಟ್ಟಡ, ಬೆಂಗಳೂರು
5. ವಿಶೇಷಾಧಿಕಾರಿ (ಜಿಲ್ಲಾ ಪಂಚಾಯತ್) ಹಾಗೂ ಪದ ನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು
6. ಉಪ ನಿರ್ದೇಶಕರು, ಖಜಾನೆ ಗಣಕಜಾಲ ನಿರ್ವಹಣಾ ಕೇಂದ್ರ, ಸೌತ್ ಬ್ಲಾಕ್, ಎರಡನೇ ಮಹಡಿ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು
7. ಜಂಟಿ ಕೃಷಿ ನಿರ್ದೇಶಕರು, ಬೆಳಗಾಂ/ಚಾಮರಾಜನಗರ/ದಕ್ಷಿಣ ಕನ್ನಡ/ ಧಾರವಾಡ/ ಹಾಸನ/ಕೊಡಗು/ಮೈಸೂರು ಮತ್ತು ಉಡುಪಿ

ಪ್ರತಿಯನ್ನು ಮಾಹಿತಿಗಾಗಿ:

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
2. ಅಭಿವೃದ್ಧಿ ಆಯುಕ್ತರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ(ಪಂಚಾಯತ್‌ರಾಜ್)ರವರ ಆಪ್ತ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
4. ಆಂತರಿಕ ಆರ್ಥಿಕ ಸಲಹೆಗಾರರು ಹಾಗೂ ಪದ ನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
5. ನಿರ್ದೇಶಕರು, ಖಜಾನೆ ಇಲಾಖೆ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಕೇಂದ್ರ, ಬೆಂಗಳೂರು
6. ಜಂಟಿ ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ನೃಪತುಂಗ ರಸ್ತೆ, ಬೆಂಗಳೂರು
7. ಮುಖ್ಯ ಸಂಪಾದಕರು, ಕರ್ನಾಟಕ ವಿಕಾಸ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ,ಬಹುಮಹಡಿ ಕಟ್ಟಡ,ಬೆಂಗಳೂರು ರವರಿಗೆ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲು ಕೋರಿ.
8. ಮಾಹಿತಿ ಅಧಿಕಾರಿ, ವೆಬ್‌ಸೈಟ್ ವಿಭಾಗ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
9. ಶಾಖಾಧಿಕಾರಿ, ಪತ್ರ ಸ್ವೀಕಾರ ಮತ್ತು ರವಾನೆ ಶಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
10. ಶಾಖಾ ರಕ್ಷಾ ಕಡತಕ್ಕೆ/ಹೆಚ್ಚುವರಿ ಪ್ರತಿಗಳು.

****

## ಅನುಬಂಧ –1

**ಸರ್ಕಾರದ ಆದೇಶ ಸಂ.ಗ್ರಾಅಪ.18.ಪಘಯೋ.2015 ಬೆಂಗಳೂರು, ದಿನಾಂಕ:24–03–2016.**

ಪಶ್ಚಿಮ ಘಟ್ಟಗಳ ಅಭಿವೃದ್ಧಿ ಕಾರ್ಯಕ್ರಮದ ಅಡಿ **2014–15**ನೇ ಸಾಲಿನ ಅನುಮೋದಿತ ಕ್ರಿಯಾ ಯೋಜನೆಯ ಮುಂದುವರಿದ ಕಾಮಗಾರಿಗಳಿಗಾಗಿ ಜಿಲ್ಲಾವಾರು **ಕೊನೆಯ** ಕಂತಿನ ಅನುದಾನ ಬಿಡುಗಡೆ ತ:ಖ್ತೆ

| ಕ್ರ. ಸಂ. | ಜಿಲ್ಲೆ | ಬಿಡುಗಡೆ ಮೊತ್ತ (₹ ಲಕ್ಷಗಳಲ್ಲಿ) |
|---|---|---|
| *1* | *2* | *3* |
| 1 | ಬೆಳಗಾಂ | 67.91 |
| 2 | ಚಾಮರಾಜನಗರ | 10.12 |
| 3 | ಧಾರವಾಡ | 9.66 |
| 4 | ದಕ್ಷಿಣ ಕನ್ನಡ | 31.26 |
| 5 | ಹಾಸನ | 19.37 |
| 6 | ಕೊಡಗು | 18.00 |
| 7 | ಮೈಸೂರು | 11.25 |
| 8 | ಉಡುಪಿ | 39.43 |
| | ಒಟ್ಟು: | **207.00** |

(ಎನ್.ಕೃಷ್ಣಪ್ಪ)
ನಿರ್ದೇಶಕರು(ಗ್ರಾ.ಮೂ.ಸೌ–2) ಹಾಗೂ
ಪದ ನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿಗಳು,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ
**karwgdp@gmail.com Ph.No. 080-22343509**